# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

---

**ಸಂಖ್ಯೆ: ತುವಿತು:ಪಿಹೆಚ್.ಡಿ:ಪ್ರ.ಅ:2026–27: 47** **ದಿನಾಂಕ: 23.04.2026**

## ಅಧಿಸೂಚನೆ

**ವಿಷಯ:** 2026–27 ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.
**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 23.04.2026 (ಕಂಡಿಕೆ–45).

****

ತುಮಕೂರು ವಿಶ್ವವಿದ್ಯಾನಿಲಯದ 2026–27 ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಅರ್ಜಿ ಆಹ್ವಾನಿಸಲಾಗಿರುವ ವಿಷಯಗಳು: **ಅರ್ಥಶಾಸ್ತ್ರ, ಇಂಗ್ಲೀಷ್, ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಪತ್ರಿಕೋದ್ಯಮ & ಸಮೂಹ ಸಂವಹನ, ಕನ್ನಡ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ, ವ್ಯವಹಾರ ನಿರ್ವಹಣೆ, ಜೀವರಸಾಯನಶಾಸ್ತ್ರ, ಜೈವಿಕತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ, ವಿದ್ಯುನ್ಮಾನ, ಪರಿಸರ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಭೌತಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗ.**

ತುಮಕೂರು ವಿಶ್ವವಿದ್ಯಾನಿಲಯದ ಜಾಲತಾಣ https://tumkuruniversity.ac.in/phd2026/ ಅಲ್ಲಿ ವಿವರಗಳನ್ನು ನೀಡಿರುವಂತೆ ಆನ್‌ಲೈನ್ ಅರ್ಜಿಯನ್ನು ನಿಗದಿತ ಅರ್ಜಿ ಶುಲ್ಕ ಹಾಗೂ ಅಗತ್ಯ ದಾಖಲೆಗಳೊಂದಿಗೆ **ಶುಕ್ರವಾರ ದಿನಾಂಕ: 22.05.2026** ರೊಳಗಾಗಿ ಸಲ್ಲಿಸುವುದು. ಅಭ್ಯರ್ಥಿಯು ಭರ್ತಿ ಮಾಡಿದ ಮುದ್ರಿತ ಅರ್ಜಿಯನ್ನು ಸಹಿಯೊಂದಿಗೆ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಸಂಯೋಜಕರಿಗೆ ಸಲ್ಲಿಸತಕ್ಕದ್ದು. ಸಾಮಾನ್ಯ ಅಭ್ಯರ್ಥಿಗಳಿಗಾಗಿ ಅರ್ಜಿ ಶುಲ್ಕ **ರೂ. 1,700/–** ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗ (Non-creamy Layer)/ ವಿಕಲಚೇತನ ಅಭ್ಯರ್ಥಿಗಳಿಗೆ (ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಮಿತಿ ರೂ.2.50 ಲಕ್ಷ ಹೊಂದಿರುವ ಆದಾಯ ಪ್ರಮಾಣಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು) ಶುಲ್ಕ **ರೂ. 850/–** ಗಳನ್ನು ಎಸ್.ಬಿ.ಐ ಕಲೆಕ್ಟ್ ಮುಖಾಂತರ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಹೆಸರಿಗೆ ಪಾವತಿಸಿ ಅದರ ಮುದ್ರಿತ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ **ಬುಧವಾರ ದಿನಾಂಕ: 27.05.2026** ರೊಳಗಾಗಿ ಸಲ್ಲಿಸುವುದು.

ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯ ಮೂಲಕ ಅರ್ಹರಾಗುತ್ತಾರೆ. UGC-NET(Category-1)/CSIR/DST/DBT/ICMR-JRF/SRF,INSPIRE ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ವಿನಾಯಿತಿ ಇರುತ್ತದೆ. ಆದರೆ, ಸದರಿ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಜೊತೆ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ. **ಪಿಹೆಚ್.ಡಿ ಪ್ರವೇಶಾತಿಯನ್ನು ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2024 ರನ್ವಯ ಮಾಡಲಾಗುವುದು.**

| ವಿವರ | ವಾರ | ದಿನಾಂಕ |
|---|---|---|
| ಅಂತರ್ಜಾಲದಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | ಶುಕ್ರವಾರ | 24.04.2026 |
| ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | ಶುಕ್ರವಾರ | 22.05.2026 |
| ಮುದ್ರಿತ ಅರ್ಜಿಯನ್ನು ಆಯಾ ವಿಭಾಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ | ಬುಧವಾರ | 27.05.2026 |
| ಪ್ರವೇಶ ಪರೀಕ್ಷೆ ದಿನಾಂಕ | ಶನಿವಾರ | 06.06.2026 |
| ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ | ಮಂಗಳವಾರ | 09.06.2026 |
| ಮೌಖಿಕ ಪರೀಕ್ಷೆಯ ದಿನಾಂಕಗಳು | ಮಂಗಳವಾರ | 16.06.2026 ರ ಒಳಗೆ |
| ಕ್ರೂಢೀಕೃತ ಮೆರಿಟ್ ಪಟ್ಟಿ ಪ್ರಕಟಣೆ | ಶನಿವಾರ | 20.06.2026 |
| ಮಾರ್ಗದರ್ಶಕರ ಹಂಚಿಕೆಯ ಕೌನ್ಸಿಲಿಂಗ್ | ಗುರುವಾರ | 25.06.2026 ರ ಒಳಗೆ |

ಅಪೂರ್ಣ ಆನ್‌ಲೈನ್ ಅರ್ಜಿಗಳು ಮತ್ತು ಸಂಬಂಧಪಟ್ಟ ದಾಖಲೆಗಳು ಇಲ್ಲದಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಅರ್ಹತೆ:** ಅಭ್ಯರ್ಥಿಯು ಯುಜಿಸಿಯಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾನಿಲಯಗಳು/ ವಿದ್ಯಾಸಂಸ್ಥೆಗಳಲ್ಲಿ ಅಧ್ಯಯನ ಮಾಡಿರಬೇಕು ಹಾಗೂ ಸದರಿ ಸ್ನಾತಕೋತ್ತರ ಪರೀಕ್ಷೆಯಲ್ಲಿ **ಕನಿಷ್ಟ 55%** ಅಂಕಗಳನ್ನು ಪಡೆದಿರಬೇಕು; ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗ (Non-creamy Layer)/ ವಿಕಲಚೇತನ ಅಭ್ಯರ್ಥಿಗಳಿಗೆ 5% ರಿಯಾಯಿತಿ ಇರುತ್ತದೆ (ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು).

**ಪ್ರವೇಶ ಪರೀಕ್ಷೆಯ ವಿವರಗಳು:**

- ಪ್ರವೇಶಾತಿ ಪರೀಕ್ಷೆಯು **100 ಅಂಕವುಳ್ಳ ಬಹು ಆಯ್ಕೆಯ (MCQ's) ಪ್ರಶ್ನೆಗಳಾಗಿರುತ್ತದೆ.** ಅದರಲ್ಲಿ **ಸಂಶೋಧನಾ ವಿಧಾನಕ್ಕೆ (Research Methodology) ಶೇ.30** ಮತ್ತು **ಅಧ್ಯಯನಿತ ಸ್ನಾತಕೋತ್ತರ ಪದವಿಯ** ವಿಷಯಕ್ಕೆ **ಶೇ. 70 ರಷ್ಟು** ಅಂಕಗಳನ್ನು ನಿಗಧಿಪಡಿಸಲಾಗಿದೆ. **ಪರೀಕ್ಷೆಯ ಕಾಲಾವಧಿ 3 ಗಂಟೆಗಳಾಗಿರುತ್ತದೆ.**
- ಪಿಹೆಚ್.ಡಿ ಪ್ರವೇಶಾತಿಗೆ ಅರ್ಹರಾಗಲು, ಪ್ರವೇಶಾತಿ ಪರೀಕ್ಷೆಯಲ್ಲಿ ಅಭ್ಯರ್ಥಿಯು 100 ಅಂಕಗಳಿಗೆ **ಕನಿಷ್ಟ 50 ಅಂಕಗಳನ್ನು** (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗ (Non-creamy Layer)/ ವಿಕಲಚೇತನ ಅಭ್ಯರ್ಥಿಗಳು **45 ಅಂಕಗಳನ್ನು**) ಪಡೆಯತಕ್ಕದ್ದು.
- **ಪ್ರವೇಶಾತಿ ಪರೀಕ್ಷೆಯಲ್ಲಿ** ಅರ್ಹರಾದ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ **ಶೇಕಡ 30 ಅಂಕಗಳು** ಮತ್ತು ಪ್ರವೇಶ ಪರೀಕ್ಷೆಗೆ **ಶೇಕಡ 70 ಅಂಕಗಳನ್ನು** ನಿಗಧಿಗೊಳಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- **ಪ್ರವೇಶಾತಿ ಪರೀಕ್ಷೆಯಲ್ಲಿ ವಿನಾಯಿತಿ** ಪಡೆದ ಅಭ್ಯರ್ಥಿಗಳು **ಸಂಬಂಧಿತ ವಿಷಯ ಮುಖ್ಯ ಪರೀಕ್ಷೆಯ** ಪ್ರತಿಶತ **70** ಅಂಕಗಳು ಹಾಗೂ ಮೌಖಿಕ ಪರೀಕ್ಷೆಯಲ್ಲಿ **30** ಅಂಕಗಳನ್ನು ಪರಿಗಣಿಸಲಾಗುವುದು.
- ಪ್ರವೇಶ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಪಿಹೆಚ್.ಡಿ ಪದವಿಗೆ ಆಯ್ಕೆಯಾಗುವುದಕ್ಕೆ ಅರ್ಹತೆ ಹೊಂದಿರುತ್ತಾರೆ ಹೊರತು **ತೇರ್ಗಡೆಯಾದ ಎಲ್ಲಾ ಅಭ್ಯರ್ಥಿಗಳಿಗೆ** ಪಿಹೆಚ್.ಡಿ ಪದವಿ ಪ್ರವೇಶ ಸಿಗಲಾರದು.
- ಪ್ರವೇಶ ಪರೀಕ್ಷೆ ಹಾಗೂ UGC-NET ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ **ಪ್ರತ್ಯೇಕವಾಗಿ ಸೀಟುಗಳನ್ನು ಮೀಸಲಿಡಲಾಗುವುದಿಲ್ಲ.**

**ಸಾಮಾನ್ಯ ಸೂಚನೆಗಳು:**

1. ಪೂರ್ಣಕಾಲಿಕ ಸಂಶೋಧನಾರ್ಥಿಗಳಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು.
2. ಪೂರ್ಣಕಾಲಿಕ ಪಿಹೆಚ್.ಡಿ ಬಯಸುವ ಅಭ್ಯರ್ಥಿಗಳು ಸಂಶೋಧನೆಯ ಅವಧಿಯಲ್ಲಿ ಯಾವುದೇ ಹುದ್ದೆಗೆ ಸೇರುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.
3. 'ಮುದ್ರಿತ ಅರ್ಜಿಗಳನ್ನು' ಎಲ್ಲಾ ಕೆಲಸದ ದಿನಗಳಲ್ಲಿ **ಬೆಳಿಗ್ಗೆ 10** ರಿಂದ **ಸಂಜೆ 5** ಗಂಟೆ ವರೆಗೂ ಆಯಾ ವಿಭಾಗದಲ್ಲಿ ಸ್ವೀಕರಿಸಲಾಗುವುದು.
4. ಅರ್ಜಿಯ ಜೊತೆ ಲಗತ್ತಿಸಿದ ಎಲ್ಲಾ, ದಾಖಲೆಗಳನ್ನು **ಸ್ವಯಂ ದೃಢೀಕರಿಸಿ** ಸಲ್ಲಿಸತಕ್ಕದ್ದು.
5. **ಮೀಸಲಾತಿ** ಬಯಸುವ ಅಭ್ಯರ್ಥಿಗಳು ಪ್ರಸ್ತುತ **ಚಾಲ್ತಿಯಲ್ಲಿರುವ ಜಾತಿ/ಆದಾಯ ಪ್ರಮಾಣ** ಪತ್ರವನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.
6. ಸರ್ಕಾರಿ ಸೇವೆಯಲ್ಲಿ ಇದ್ದಂತಹ ಅಭ್ಯರ್ಥಿಗಳು ಸಂಬಂಧಪಟ್ಟ **ಪ್ರಾಧಿಕಾರದ ಮುಖಾಂತರ** ಅರ್ಜಿ ಸಲ್ಲಿಸತಕ್ಕದ್ದು.
7. ವಿದ್ಯಾರ್ಥಿಗಳು ಅಂಚೆ ಮೂಲಕ ಕಳುಹಿಸುವ ಅರ್ಜಿಗಳನ್ನು ಸಂಬಂಧಿಸಿದ ವಿಭಾಗಗಳ ವಿಳಾಸಕ್ಕೆ ನೇರವಾಗಿ ಸಲ್ಲಿಸತಕ್ಕದ್ದು ಹಾಗೂ ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಜವಾಬ್ದಾರರಾಗುವುದಿಲ್ಲ.
8. **ಕೊನೆಯ ದಿನಾಂಕದ ನಂತರ** ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

9. **ಪ್ರವೇಶ ಪತ್ರವನ್ನು** ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ ಖುದ್ದಾಗಿ ಪಡೆಯತಕ್ಕದ್ದು.
10. ರಾಜ್ಯ ಸರ್ಕಾರದ ಮೀಸಲಾತಿಯನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
11. ಅಧಿಸೂಚನೆಯಲ್ಲಿ ನಮೂದಿಸಿರುವ ವಿಷಯವಾರು ಸೀಟುಗಳ ಭರ್ತಿ ಮಾಡುವ ಮತ್ತು ಮಾಡದೇ ಇರುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ ಹಾಗೂ ವಿಷಯವಾರು ಖಾಲಿ ಸೀಟುಗಳಲ್ಲಿ ಬದಲಾವಣೆಗಳಾಗುವ ಸಾಧ್ಯತೆಗಳಿರುತ್ತದೆ.

**ಹೆಚ್ಚಿನ ಮಾಹಿತಿಗಾಗಿ** ಆಯಾ ವಿಭಾಗದ ಅಧ್ಯಕ್ಷರು/ಸಂಯೋಜಕರನ್ನು ಸಂಪರ್ಕಿಸುವುದು (ವಿವರಗಳನ್ನು ಒದಗಿಸಲಾಗಿದೆ).

23/4/2016

**ಕುಲಸಚಿವರು**
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. **ಕುಲಸಚಿವರು (ಮೌಲ್ಯಮಾಪನ),** ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. **ಹಣಕಾಸು ಅಧಿಕಾರಿಗಳು,** ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. **ಡೀನರು** – ಕಲಾ/ವಿಜ್ಞಾನ/ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. **ಅಧ್ಯಕ್ಷರು/ಸಂಯೋಜಕರು,** ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. **ಅಧ್ಯಕ್ಷರು/ಸಂಯೋಜಕರು,** ಸ್ನಾತಕೋತ್ತರ ವಿಭಾಗಗಳು, ಜ್ಞಾನಸಿರಿ ಕ್ಯಾಂಪಸ್, ಬಿದರಕಟ್ಟೆ, ಹೆಬ್ಬೂರು (ಹೋ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. **ಪ್ರಾಂಶುಪಾಲರು,** ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. **ಪ್ರಾಂಶುಪಾಲರು,** ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. **ಸಿಸ್ಟಂ ಅನಾಲಿಸ್ಟ್,** ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು)
9. ಎಲ್ಲಾ ವಿಭಾಗದ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
11. ಕಚೇರಿ ಪ್ರತಿ.

| Tumkur University, Tumkuru | | |
|---|---|---|
| 2026-27 Ph.D VACANCY LIST | | |
| **Sl.No** | **DEPARTMENTS** | **TOTAL VACANCY** |
| **FACULTY OF ARTS** | | |
| 1 | Economics | 23 |
| 2 | English | 34 |
| 3 | History & Archaeology | 15 |
| 4 | Journalism | 3 |
| 5 | Kannada | 21 |
| 6 | Political Science | 28 |
| 7 | Sociology | 15 |
| 8 | Social Work | 4 |
| **FACULTY OF COMMERCE AND MANAGEMENT** | | |
| 9 | Commerce | 16 |
| 10 | Management | 4 |
| **FACULTY OF SCIENCE AND TECHNOLOGY** | | |
| 11 | Biochemistry | 19 |
| 12 | Biotechnology | 6 |
| 13 | Botany | 2 |
| 14 | Chemistry | 67 |
| 15 | Computer Science | 1 |
| 16 | Electronics | 2 |
| 17 | Environmental Science | 4 |
| 18 | Library & Information Science | 18 |
| 19 | Mathematics | 13 |
| 20 | Microbiology | 7 |
| 21 | Physics | 29 |
| 22 | Zoology | 8 |
| **Total** | | **339** |

23/4/26

**Registrar**

Registrar
Tumkur University
Tumkur